ಕರ್ನಾಟಕ ಸರ್ಕಾರ

# ಮಕ್ಕಳ ರಕ್ಷಣಾ ನಿರ್ದೇಶನಾಲಯ

C/o , ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001, ಕರ್ನಾಟಕ

**E-mail ID:** icps.kar@gmail.com **Ph.No.080-**22879382

ಸಂಖ್ಯೆ:ಕಎಸ್ಐಸಿಪಿಎಸ್/ಜೆಜೆಬಿ/ಬಾ.ನ್ಯಾ.ಮಂ/20/2020-21 ದಿನಾಂಕ: 05-12-2020

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್
(ಅಪರಾಧ ಮತ್ತುತಾಂತ್ರಿಕ ಸೇವೆಗಳು),
ನೃಪತುಂಗರಸ್ತೆ,
ಬೆಂಗಳೂರು

ಮಾನ್ಯರೇ,

ವಿಷಯ: ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮ, 2016
ನಿಯಮ 8(6)ರಂತೆ ಕ್ರಮ ವಹಿಸುವ ಬಗ್ಗೆ

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮ, 2016 ನಿಯಮ 8(6) ರ ಪ್ರಕಾರ "A list of all designated Child Welfare Police Officers, Child Welfare Officers, Probation Officers, Para Legal Volunteers, District Legal Services Authorities and registered voluntary and non-governmental organisations in a district, Principal Magistrate and members of the Board, members of Special Juvenile Police Unit and Child line Services with contact details shall be prominently displayed in every police station" ಎಂದಿದೆ.

ಎಲ್ಲಾ ಪದನಿಮಿತ್ತ ಶಿಶು ಕಲ್ಯಾಣ ಪೊಲೀಸ್ ಅಧಿಕಾರಿಗಳು(Child Welfare Police Officers), ಶಿಶು ಕಲ್ಯಾಣಾಧಿಕಾರಿಗಳು (Child Welfare Officers), ಪ್ರೋಬೇಷನ್ ಅಧಿಕಾರಿಗಳು, ಅರೆ ಕಾನೂನು ಸ್ವಯಂಸೇವಕರು (Para Legal Volunteers), ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಗಳು ಮತ್ತು ಜಿಲ್ಲೆಯ ನೋಂದಾಯಿತ ಸ್ವಯಂ ಸೇವಾ ಮತ್ತು ಸರ್ಕಾರೇತರ ಸಂಸ್ಥೆಗಳು, ಮಂಡಳಿಯ ಪ್ರಧಾನ ದಂಡಾಧಿಕಾರಿ ಮತ್ತು ಸದಸ್ಯರುಗಳು, ಮಕ್ಕಳ ವಿಶೇಷ ಪೋಲೀಸ್ ಘಟಕ (ಎಸ್‌ಜೆಪಿಯು) ಮತ್ತು ಶಿಶು ಸೇವಾ ಘಟಕಗಳ ದೂರವಾಣಿ ಸಂಖ್ಯೆಗಳನ್ನೊಳಗೊಂಡ ಪಟ್ಟಿಯನ್ನು ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಪ್ರಧಾನವಾಗಿ ಕಾಣುವಂತೆ ಪ್ರದರ್ಶಿಸತಕ್ಕದೆಂದು ಮತ್ತು ವಿಚಾರಣೆ ನಡೆಸುವ ಕೊಠಡಿಯನ್ನು ಮಕ್ಕಳ ಸ್ನೇಹಿಯಾಗಿ ಕಾಣುವಂತೆ ಪೈಂಟಿಂಗ್ಸ್ ಮತ್ತು ಪೋಸ್ಟರ್ಸ್‌ಗಳನ್ನು ಹಾಕಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಅವಶ್ಯಕ ಆದೇಶವನ್ನು ಹೊರಡಿಸಲು ಕೋರಲಾಗಿದೆ.

ಅಲ್ಲದೆ ಮೇಲೆ ತಿಳಿಸಲಾದ ಅಂಶಗಳ ಕುರಿತು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಬೇಕಾಗಿರುವುದರಿಂದ ತುರ್ತಾಗಿ ಕ್ರಮ ತೆಗೆದುಕೊಂಡು, ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು (ಫೋಟೋ ಸಮೇತ) ಈ ಕಚೇರಿಗೆ ಸಲ್ಲಿಸಲು ಸಂಬಂಧಪಟ್ಟ ಎಲ್ಲಾ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.

05.12.2020
ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು

REDMI NOTE 8
AI QUAD CAMERA